
# ಪರಂಜ್ಯೋತಿ

ಸಂಪುಟ : ೨೦
ಸಂಚಿಕೆ : ೪

ಸಂಸ್ಕೃತಿ ಸೌರಭ ಸೂಸುವ ಮಾಸಿಕ

ನವ್ಹೆಂಬರ
೧೯೮೭



ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ,
ಮೂರುಸಾವಿರಮಠ, ಹುಬ್ಬಳ್ಳಿ

# ಪರಂಜ್ಯೋತಿ

ಸಂಸ್ಕೃತಿ ಸೌರಭ ಸೂಸುವ ಮಾಸಿಕ

## ದೀಪಾವಳಿ ವಿಶೇಷಾಂಕ

'ಪರಂಜ್ಯೋತಿ' ಮಾಸ ಪತ್ರಿಕೆ ಹಿತೈಷಿಗಳಾದ ಸರ್ವರಿಗೂ
ದೀಪಾವಳಿಯ ಹಾರ್ದಿಕ ಶುಭಾಶಯಗಳು.

ಸಂಪಾದಕರು :
ಶ್ರೀ ಎಸ್. ಆಯ್. ಮಠದ. ಎಮ್. ಎ.

ಸಹ ಸಂಪಾದಕರು :
ಶ್ರೀ ವಿಶ್ವನಾಥ. ಹಿರೇಮಠ.

ವಾರ್ಷಿಕ ಚಂದಾ : ರೂ. ೧೦-೦೦ ಬಿಡಿ ಸಂಚಿಕೆ : ರೂ. ೧=೦೦

ಸಂಪಾದಕೀಯ :

## ೫೮ನೆಯ ಅ. ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ

# ಡಾ॥ ಸಿದ್ಧಯ್ಯನವರು ಪುರಾಣಿಕ

ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದ ಪ್ರಮುಖ ಅನುಭಾವಿಗಳ ಸಾಲಿನಲ್ಲಿ ಡಾ॥ ಸಿದ್ದಯ್ಯಾ ಪುರಾಣಿಕರು ಒಬ್ಬರು. ಸಾಹಿತ್ಯಿಕ ಪರಿಸರದಲ್ಲಿ ಜನಿಸಿದ ಇವರು ಚಿಕ್ಕಂದಿನಿಂದಲೂ ಸಾಹಿತ್ಯದ ಬಗ್ಗೆ ಒಲವುಳ್ಳವರು. ಸುಸಂಸ್ಕೃತ ಮನೆತನದಲ್ಲಿ ಜನಿಸಿ, ಉನ್ನತ ಸಂಸ್ಕಾರವನ್ನು ಹೊಂದಿ ಭಾರತೀಯ ಸಂಸ್ಕೃತಿಯ ಜೊತೆಗೆ ಕನ್ನಡ ಸಾಹಿತ್ಯದ ಪ್ರತಿಭಾ ಶಕ್ತಿಯನ್ನು ಮೈಗೂಡಿಸಿಕೊಂಡವರು, ಸರಳಜೀವನ ಉದಾತ್ತ ವಿಚಾರವನ್ನೊಳಗೊಂಡ ಪುರಾಣಿಕರು, ಕವಿಗಳಾಗಿ, ನಾಟಕಕಾರರಾಗಿ, ವಿಮರ್ಶಕರಾಗಿ, ಸೇವೆಸಲ್ಲಿಸುತ್ತಾ ಬಂದಿರುವರಲ್ಲದೆ, ಸಮಾಜದ ಏರುಪೇರುಗಳಿಗೆ ನೇರವಾಗಿ ಸ್ಪಂದಿಸಿದವರು.

"ಒಂದು ದೇಶದಲ್ಲಿ ಎಂತಹ ಕಾಯ್ದೆ ಇದೆ ಎನ್ನುವುದು ಮುಖ್ಯವಲ್ಲ ಆ ಕಾಯ್ದೆ ಎಷ್ಟರಮಟ್ಟಿಗೆ ಆಚರಣೆಯಲ್ಲಿದೆ ಎನ್ನುವದು ಬಹಳ ಮುಖ್ಯ" ಡಾ॥ ಪುರಾಣಿಕರು ತಹಶೀಲದಾರರಾಗಿ, ಆಯ್ಕೆಯಾಗಿ ಕನ್ನಡನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಸೇವೆಯನ್ನು ಮಾಡಿ, ಮೌಲ್ಯಾಧಾರಿತ ಕಾರ್ಯಗಳನ್ನು ಕೈಕೊಂಡವರು. ಸಾರಿಗೆಯ ಹಾಗೂ ಕಾರ್ಮಿಕ ಇಲಾಖೆಗಳ ಕಮೀಶನರರಾಗಿ, ದಕ್ಷ ಹಾಗೂ ನ್ಯಾಯ ನಿಷ್ಠುರ ಪರವಾದ ಅವರ ಸೇವೆ ಇಂದಿಗೂ ಮಾರ್ಗದರ್ಶಿಯಾಗಿ ನಿಲ್ಲಬಲ್ಲುದು ಎಂಬುದರಲ್ಲಿ ಯಾವ ಸಂದೇಹವು ಇಲ್ಲ. ವೃತ್ತಿಯಲ್ಲಿ ಆಡಳಿತಗಾರರಾದರೂ ಪ್ರವೃತ್ತಿಯಲ್ಲಿ ಸಾಹಿತ್ಯ ಜಿಜ್ಞಾಸು ಇವರು. ಸಮಕಾಲೀನ ವಚನಕಾರರಲ್ಲಿ ಅತ್ಯಂತ ಪ್ರಮುಖಸ್ಥಾನವನ್ನು ಪಡೆದು, ಜನಮನದ ಹೃದಯದಲ್ಲಿ ಶಾಶ್ವತವಾಗಿ ನಿಲ್ಲಬಲ್ಲ ವ್ಯಕ್ತಿಗಳಾಗಿದ್ದಾರೆ. ಬರಹದಲ್ಲಿ ಅಂದಚಂದತ್ವ ಪಡೆದುದಲ್ಲದೆ, ಉತ್ತಮ ವಾಕ್‌ಪಟುಗಳಾಗಿ, ಬಹುಭಾಷೆ ಪಂಡಿತರಾಗಿ, ವಿದ್ವತ್ತಿನ ರಸಗಂಗೆಯನ್ನು ಕನ್ನಡ ನಾಡಿನ ಜನತೆಗೆ ನೀಡಿದ್ದಾರೆ.

ಜಗತ್ತಿನ ಆದರ್ಶ ವ್ಯಕ್ತಿಗಳ ಹಿಂದೆ ಒಬ್ಬ ಮಹಿಳೆಯ ಪಾತ್ರ ಇರುತ್ತದೆ, ಎನ್ನುವ ಮಾತಿನಂತೆ ಪತಿಗೆ ತಕ್ಕ ಸತಿ ಶ್ರೀಮತಿ ಗಿರಿಜಾದೇವಿ ಪತಿಯ ಬಗ್ಗೆ ಆದರ ಅಭಿಮಾನ ಹೊಂದಿದ ಇವರು ಕೂಡಾ ದೈವಭಕ್ತರಾಗಿ, ಕಿಂಕರತೆಯಲ್ಲಿಯೇ ಶಂಕರನನ್ನು ಕಾಣುವ ಮಹಾಸತಿ ಇವರು. ಡಾ॥ ಪುರಾಣಿಕರಲ್ಲಿ ನಿರಾಡಂಬರ ಜೀವನ, ಸಹೃದಯತೆ, ಯಾರೂ ಬಂದರೂ ಆತ್ಮೀಯತೆಯಿಂದ ಅಪ್ಪಿಕೊಳ್ಳುವ ಮನೋಭಾವ. ಇವರ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಅಂಶಗಳು. ಇವರ ಸರ್ವ ಸಮರ್ಥತೆಯನ್ನು ಕಂಡು ಕಲಬುರ್ಗಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದಾರೆ. ಮಾನವೀಯ ಮೌಲ್ಯಗಳನ್ನೇ ತಮ್ಮ ಉಸುರಾಗಿರಿಸಿಕೊಂಡು, ಅರವತ್ತುರೊಂಬತ್ತು ವರ್ಷಗಳ ಸಾರ್ಥಕದ ಜೀವನವನ್ನು ಸಾಗಿಸಿದ್ದಾರೆ. ಶ್ರೀಜಗದ್ಗುರು ಗುರುಸಿದ್ಧೇಶ್ವರರು ಅವರಿಗೆ ಆಯುರಾರೋಗ್ಯ ಭಾಗ್ಯಗಳನ್ನಿತ್ತು ಸನ್ಮಂಗಲವನ್ನುಂಟು ಮಾಡಲೆಂದು ಹಾರೈಸುತ್ತೇವೆ.